ಮಳೆಗಾಲದಲ್ಲಿ ಕೃಷಿಕರು ರೇಷ್ಮೆ ಹುಳುವನ್ನು ಸಾಕಲು ಸಾಧ್ಯವಾಗದಿರುವುದರಿಂದ ಆ ಒಂದು ಋತುವಿನಲ್ಲಿ ರೇಷ್ಮೆ ಕೃಷಿಕರಿಗೆ ಆದಾಯ ಕಡಿಮೆಯಾಗಿ ತೊಂದರೆಯಾಗುತ್ತಿದೆ.

ಇ) ವಾತಾವರಣದ ಶೈತ್ಯಾಂಶವನ್ನು ನಿರ್ವಹಿಸಲು ಇದ್ದಂತಹ ತಂತ್ರಜ್ಞಾನಗಳನ್ನು ರೇಷ್ಮೆ ಕೃಷಿಕರಿಗೆ ಹೇಳಿಕೊಡಲಾಗುತ್ತಿದೆ. ಪ್ರತ್ಯೇಕ ಮೌಂಟಿಂಗ್ ಹಾಲ್ ನಿರ್ಮಿಸಲು ರೇಷ್ಮೆ ವರದಾನ ಯೋಜನೆಯಡಿ ಸಹಾಯಧನ ಅವಕಾಶವನ್ನು ಕಲ್ಪಿಸಲಾಗಿದ್ದು, ಇವುಗಳಲ್ಲಿ ಎಕ್ಸಾಸ್ಟ್ ಫ್ಯಾನುಗಳನ್ನು (exhaust fan) ಅಳವಡಿಸಲು ಸೂಚಿಸಲಾಗುತ್ತಿದೆ. ಡಿ–ಹ್ಯುಮಿಡಿಫೈಯರ್ ತಂತ್ರಜ್ಞಾನವನ್ನು ಸಂಶೋಧನಾ ಸಂಸ್ಥೆಗಳು ಶಿಫಾರಸ್ಸು ಮಾಡಿರುವುದಿಲ್ಲ, ಡಿ–ಹ್ಯುಮಿಡಿಫೈಯರ್ ತಾಂತ್ರಿಕತೆಯು ಹುಳು ಸಾಕುವ ಮನೆಯ ಹವಾನಿಯಂತ್ರಿತ (Air conditioning) ವ್ಯವಸ್ಥೆಗೆ ಸಮನಾಗಿರುವುದಲ್ಲದೆ ವಿದ್ಯುಚ್ಛಕ್ತಿ ನಿರಂತರವಾಗಿ ಲಭ್ಯವಾಗಬೇಕಾಗುತ್ತದೆ. ಮೇಲಾಗಿ ಇದರಿಂದ ಗೂಡಿನ ಉತ್ಪಾದನಾ ವೆಚ್ಚ ಹೆಚ್ಚಾಗುತ್ತದೆ. ಆದ್ದರಿಂದ ಹುಳು ಸಾಕಾಣಿಕೆ ಮನೆ/ಮೌಂಟಿಂಗ್ ಹಾಲ್‌ಗಳಲ್ಲಿ ಹೆಚ್ಚಿನ ಗಾಳಿ ಸಂಚಾರ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು ಎಕ್ಸಾಸ್ಟ್ ಬಳಕೆ ಹಾಗೂ ಸುಣ್ಣದ ಬಳಕೆಯಂತಹ ಕಡಿಮೆ ವೆಚ್ಚದ ತಾಂತ್ರಿಕತೆಗಳನ್ನು ಶಿಫಾರಸ್ಸು ಮಾಡಲಾಗಿದ್ದು, ಈ ಬಗ್ಗೆ ಎಲ್ಲಾ ಬೆಳೆಗಾರರಿಗೆ ತಿಳುವಳಿಕೆ ನೀಡಲಾಗುತ್ತಿದೆ.

772 (1103) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಜೀವಿ ಪ್ರಮಾಣ ಪತ್ರವನ್ನು ಸರ್ಕಾರಿ ನೌಕರರಿಗೆ ಮಾತ್ರ ನೀಡುವ ಬಗ್ಗೆ ಆದೇಶವಾಗಿರುವುದು ನಿಜವೇ ;

ಆ) ಸರ್ಕಾರಿ ನೌಕರರಲ್ಲದ ಹಲವಾರು ನಾಗರೀಕರಿಗೆ ಈ ಪ್ರಮಾಣ ಪತ್ರದ ಅವಶ್ಯಕತೆಯಿಂದಾಗಿ ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಸಮಾಜದ ಎಲ್ಲಾ ನಾಗರೀಕರಿಗೂ ಉತ್ತರ ಜೀವಿ ಪ್ರಮಾಣ ಪತ್ರ ನೀಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಹೌದು.

ಆ) ಸರ್ಕಾರದ ಗಮನಕ್ಕೆ ಬಂದಿದೆ.

ಇ) ಪರಿಶೀಲಿಸಲಾಗುತ್ತಿದೆ.

773 (1104) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೇರೆ ಬೇರೆ ಇಲಾಖೆಗಳಿಂದ ಜಿಲ್ಲೆಗಳಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಂಡು (ಕಲ್ಲುಕಣಿ, ಕ್ವಾರಿ ರಸ್ತೆ ನಿರ್ಮಾಣದ ಅಗಲೀಕರಣ, ಚೆಕ್ ಡ್ಯಾಂ